# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## <u>ದಾಸರಹಳ್ಳಿ ವಲಯದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 19–12–2020ರಂದು ಮಲ್ಲಸಂದ್ರ ವಾರ್ಡ್ ನಂ.13ರಲ್ಲಿ ನಡೆಸಲಾದ ವಾರ್ಡ್ ಸಭೆ ನಡವಳಿಕೆಗಳು</u>

ದಿನಾಂಕ: 19–12–2020ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಮಲ್ಲಸಂದ್ರ ವಾರ್ಡ್ ಸಂಖ್ಯೆ 13ರ ಕಛೇರಿಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಡಾ.ಸುರೇಶ್.ಎಸ್‌ರವರು, ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶಪ್ಪರವರು, ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು, ಘನತ್ಯಾಜ್ಯ ನಿರ್ವಹಣೆಯ ಶ್ರೀ ಲೋಹಿತ್‌ಕುಮಾರ್, ವಿದ್ಯುತ್ ಉಪವಿಭಾಗದಿಂದ ಶ್ರೀ ಶಶಿ (ಬೀದಿ ದೀಪ ನಿರ್ವಹಣೆ) ಕಲ್ಯಾಣ ಇಲಾಖೆಯ ಶ್ರೀ.ವೆಂಕಟರಾಯಪ್ಪ, ಬೆಂಗಳೂರು ಜಲ ಮಂಡಳಿಯಿಂದ ಲೋಕನಾಥ, ಇನ್ಸ್‌ಪೆಕ್ಟರ್ ಪಶುಪಾಲನೆ ಇಲಾಖೆಯಿಂದ ಶ್ರೀಮತಿ ಕೆ.ಎಸ್ ಸುಧಾಮಣಿ ಭಾಗವಹಿಸಿದ್ದರು.

<u>**ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ತೀರ್ಮಾನಿಸಲಾಗಿದೆ.**</u>

- **ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ**

1. ವಾರ್ಡ್‌ಗಳಲ್ಲಿ ಬೀದಿ ದೀಪಗಳ ಬಗ್ಗೆ ದೂರುಗಳು ಬಂದಾಗ ಬಂದಿರುವ ದೂರಿನ ಸ್ಥಳದ ಜಿ.ಪಿ.ಎಸ್. ಫೋಟೋವನ್ನು ಹಾಕಿ ಅದಷ್ಟು ಬೇಗನೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಯಿತು.
2. ಮಲ್ಲಸಂದ್ರ ಪೈಪ್‌ಲೈನ್ ಮುಖ್ಯರಸ್ತೆಯಲ್ಲಿರುವ ಪಾರ್ಕ್‌ನಲ್ಲಿ ಬೀದಿ ದೀಪಗಳು ಸಮರ್ಪಕವಾಗಿ ಉರಿಯುತ್ತಿಲ್ಲ ಎಂದು ಶ್ರೀ ಅಶೋಕ್ ಕುಮಾರ್ ರವರು ಸಮಿತಿ ಸದಸ್ಯರು ತಿಳಿಸಿ. ತುರ್ತಾಗಿ ದುರಸ್ತಿ ಪಡಿಸಲು ಶ್ರೀ. ಶಶಿಯವರಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು ಸದರಿಯವರು ಈಗಾಗಲೇ ದುರಸ್ತಿ ಪಡಿಸುವುದಾಗಿ ತಿಳಿಸಿದರು

- **ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ವಾರ್ಡ್ ನಂ. 13ರಲ್ಲಿ ಇರುವ ಮಲ್ಲಸಂದ್ರ ಕೆರೆಯ ಉಸ್ತುವರಿಯನ್ನು ಈಗಾಗಲೇ ಲೇಕ್ ಎ.ಇ.ಇ. ರವರು ಕೆರೆಯ ಬೌಂಡರಿಯನ್ನು ಮಾರ್ಕ್ ಮಾಡಿ ತೆರೆವುಗೊಳಿಸಲು ಸೂಚಿಸಿರುತ್ತಾರೆ. ಆದರೆ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಹಾಲಿ ಮಾಡಿರುವ ಮಾರ್ಕ್ ಸರಿ ಇಲ್ಲಾ ಅದ್ದರಿಂದ ಮತ್ತೊಮ್ಮೆ ಕೆರೆಯ ಸರ್ವೆ ಮಾಡಿ, ಗಡಿಯನ್ನು ಗುರುತಿಸಲು ಕೋರಿರುತ್ತಾರೆ. ಅದರಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತುರ್ತಾಗಿ ಸರ್ವೆ ಮಾಡಿಸಿ ಕೆರೆಯ ಹದ್ದು ಬಸ್ತುನ್ನು ಫಿಕ್ಸ್ ಮಾಡಿಸಿಕೊಡಲು ಸಭೆಯಲ್ಲಿ ಸೂಚಿಸಲಾಯಿತು ಮತ್ತು ಲೇಕ್ ಎಇಇ ರವರಿಗೆ ಈ ಸಂಬಂಧ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು

* **ಆರೋಗ್ಯ ಇಲಾಖೆ ಹಾಗೂ ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು (ಹಿರಿಯ ಆರೋಗ್ಯಾಧಿಕಾರಿಗಳು)

1. ಪ್ರದೇಶ ವಾರು ಸೊಳ್ಳೆ ಔಷಧಿಯನ್ನು ಸಮರ್ಪಕವಾಗಿ ಸಿಂಪಡಿಸುತ್ತಿರುವುದಾಗಿ ತಿಳಿಸಿದರು
2. ವಾರ್ಡ್ ಸಮಿತಿಯ ಸದಸ್ಯರು ಸೊಳ್ಳೆ ಔಷಧಿಯನ್ನು ಎಷ್ಟು ಜನ ಸಿಂಪಡಿಸುತ್ತಾರೆ. ಎಷ್ಟು ಮೀಷನ್‌ಗಳನ್ನು ಉಪಯೋಗಿಸಿ ಸಿಂಪಡಿಸಿದ್ದಾರೆ. ಎಂದು ಪ್ರಶ್ನಿಸಿದರು, ಆದರಂತೆ ತುರ್ತಾಗಿ ಮುಂದಿನ ಸಭೆಯಲ್ಲಿ ಸಮರ್ಪಕವಾಗಿ ಉತ್ತರ ನೀಡಲು ಸೂಚಿಸಲಾಯಿತು.
3. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ರವೀಂದ್ರನಗರ, 1ನೇ ಅಡ್ಡರಸ್ತೆಯಿಂದ 14ನೇ ಅಡ್ಡ ರಸ್ತೆವರೆಗೆ ಸರಿಯಾಗಿ ಕಸವನ್ನು ತೆಗೆಯುತ್ತಿಲ್ಲ ಎಂದು ಆಕ್ಷೇಪಿಸಿದರು ಉತ್ತರವಾಗಿ ಶ್ರೀ ಲೋಹಿತ್ ಕಿರಿಯ ಆರೋಗ್ಯ ಪರೀವಿಕ್ಷಕರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
4. ಕೋವಿಡ್–19ರ ಕೆಲಸ ಕಾರ್ಯವನ್ನು ಘ.ತ್ಯಾನಿ., ಆರೋಗ್ಯ ಇಲಾಖೆ, ಬಿಬಿಎಂಪಿ ವತಿಯಿಂದ ಆರೋಗ್ಯ ಕೇಂದ್ರ ಮಲ್ಲಸಂದ್ರರವರಿಗೆ ಬೆಂಬಲವಾಗಿ ನಿಂತು ಕೆಲಸ ನಿರ್ವಹಿಸಲಾಗುತ್ತಿದೆ ಎಂದು ಶ್ರೀ ಪ್ರವೀಣ್‌ರವರು (ಹಿರಿಯ ಆರೋಗ್ಯಾಧಿಕಾರಿಗಳು) ತಿಳಿಸಿದರು.
5. ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಪ್ರತಿ ದಿನ ಕೋವಿಡ್–19 ಟೆಸ್ಟ್ ಮಾಡಲಾಗುತ್ತಿದೆ. ಲಿಂಕ್ ವರ್ಕರ್ಸ್‌ಗಳು ಆಸ್ಪತ್ರೆಯಿಂದ ಮೆಡಿಕಲ್ ಕಿಟ್‌ಗಳನ್ನು ಪಡೆದು ರೋಗಿಗಳ ಸ್ಥಳಕ್ಕೆ ನೀಡುವ ಕೆಲಸ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಂಪ್ ನಡೆಸುವ ಕಾರ್ಯವನ್ನು ಮಾಡುತ್ತಿದ್ದಾರೆ ಹಾಗು ವಾರದಲ್ಲಿ ಮೂರು ದಿವಸ ಹೋಮ್ ಕ್ವಾರೆಂಟೈನ್ ಆದವರನ್ನು ಬೇಟಿ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದಾರೆ ಎಂದು ತಿಳಿಸಿದರು.

* **ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಲ್ಲಸಂದ್ರ ವಿಭಾಗ ಕಛೇರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

1. ನೋಡಲ್ ಆಫೀಸರ್‌ರವರ ಕಛೇರಿ ಮತ್ತು ವಾರ್ಡ್ ಕಛೇರಿಯಲ್ಲಿ ಕಂಪ್ಯೂಟರ್ ಮತ್ತು ಕಂಪ್ಯೂಟರ್ ಅಪರೇಟರ್ ಇಲ್ಲದಿರುವುದರಿಂದ ಕಛೇರಿ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸದರಿ ಕಛೇರಿಗೆ ಒಂದು ಕಂಪ್ಯೂಟರ್ ಹಾಗೂ ಕಂಪ್ಯೂಟರ್ ಕಾರ್ಯ ನಿರ್ವಹಿಸಲು ಸಿಬ್ಬಂದಿಯನ್ನು ತುರ್ತಾಗಿ ವ್ಯವಸ್ಥೆ ಮಾಡಲು ಸೂಚಿಸಲಾಯಿತು.

* **ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಹಾಲಿ ಮಲ್ಲಸಂದ್ರ ವಾರ್ಡ್‌ನಲ್ಲಿ ಹಲವಾರು ಕಡೆ ರಸ್ತೆಗಳನ್ನು ಅಗೆದು ಒಳಚರಂಡಿ ಮತ್ತು ಕಾವೇರಿ ಪೈಪ್‌ಗಳನ್ನು ಅಳವಡಿಸುವುದು ಕಂಡು ಬಂದಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸುವ ಮೊದಲು ಯಾವ ರಸ್ತೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ ಎಂಬ ಬಗ್ಗೆ ವಾರ್ಡ್‌ನ ಬಿಬಿಎಂಪಿ ಇಂಜಿನಿಯರ್‌ವರಿಗೆ ಮಾಹಿತಿ ನೀಡಲು ಸೂಚಿಸಿ ಹಾಗೂ ಈ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಗಳು ಹಾಗೂ ನೀಡಿರುವ ಬಿಲ್ಲುಗಳ ವಿವರಗಳನ್ನು ವಾರ್ಡ್ ಸಮಿತಿಗೆ ಪ್ರತಿ ಸಭೆಗೆ ಸಲ್ಲಿಸಲು ಸೂಚಿಸಲಾಯಿತು. ಮತ್ತು ಹಾಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಗಳಲ್ಲಿ

ಅಗೆದಿರುವ ಕಾಂಕ್ರೀಟ್/ಮಣ್ಣನ್ನು ತೆಗದು "Wetmix macdom" ಹಾಕಿ ಸಾರ್ವಜನಿಕರು ಒಡಾಡಲು ಅನುಕೂಲ ಮಾಡಿಕೊಡುವಂತೆ ಸೂಚಿಸಲಾಯಿತು

**ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ಹಾಲಿ ವೋಟರ್ ಐಡಿ ನೀಡುವ ಕಾರ್ಯವು ಚಾಲನೆಯಲ್ಲಿದ್ದು, ಇದಕ್ಕೆ ಸಂಬಂಧಿಸಿದಂತೆ, ವಾರ್ಡ್ ಕಛೇರಿಯಲ್ಲಿರುವ ಕಂದಾಯ ಕಛೇರಿಯಲ್ಲಿ ವೋಟರ್ ಐಡಿ ಮಾಡಿಸಲು ಬರುವ ಎಲ್ಲಾ ಸಾರ್ವಜನಿಕರಿಗೆ ವೋಟರ್ ಐಡಿಯನ್ನು ನೀಡಲು ಸೂಚಿಸಲಾಯಿತು.

**ಇತರೆ ವಿಷಯಗಳು**

1. ಪೈಪ್‌ಲೈನ್ ನಲ್ಲಿರುವ ಪಾರ್ಕ್‌ನಲ್ಲಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು ಅವುಗಳನ್ನು ನಿಯಂತ್ರಿಸಲು ಎಲ್ಲಾ ಭಾಗಗಳಲ್ಲಿ ಗೇಟ್ ಅಳವಡಿಸಲು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.
2. ಪೈಪ್‌ಲೈನ್ ಪಾರ್ಕ್‌ನಲ್ಲಿರುವ ಲೈಟ್‌ಗಳ ಸ್ವಿಚ್‌ಗಳನ್ನು ಯಾರೋ ಕೇಡಿಗೇಡಿಗಳು ತೆಗೆಯುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಈ ವಿಷಯದ ಬಗ್ಗೆ ಗಮನ ಹರಿಸಲು ಸಂಬಂಧಪಟ್ಟ ಪೋಲೀಸ್ ಇಲಾಖೆಯವರಿಗೆ ಸೂಚಿಸಲಾಯಿತು.
3. ರಸ್ತೆಯ ಬದಿಗಳಲ್ಲಿರುವ ಮರಗಳನ್ನು ಅರಣ್ಯ ಇಲಾಖೆಯ ಸಿಬ್ಬಂಧಿಗಳು ಹಾಗೂ ಬೆಸ್ಕಾಂ ಸಿಬ್ಬಂಧಿಗಳು ಕಡಿಯುತ್ತಿದ್ದು ಕಡಿದ ಮರಗಳ ಕೊಂಬೆಗಳನ್ನು ಎರಡು ಇಲಾಖೆಯ ಸಿಬ್ಬಂಧಿಗಳು ಸಮನ್ವಯ ಸಾಧಿಸಿ ಸ್ವಚ್ಛಗೊಳಿಸಲು ಸೂಚಿಸಲಾಯಿತು

ನೋಡಲ್ ಅಧಿಕಾರಿಗಳು ಹಾಗು ಅಧ್ಯಕ್ಷರು,
ವಾರ್ಡ್ ಸಂಖ್ಯೆ.13 ಮಲ್ಲಸಂದ್ರ

ಸಹಾಯಕ ಅಭಿಯಂತರರು ಹಾಗು ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ.13, ಮಲ್ಲಸಂದ್ರ

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು, ಬಿಬಿಎಂಪಿ ನರಸಿಂಹರಾಜ ಚೌಕ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಅಧ್ಯಕ್ಷರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

7. ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಸಹಾಯಕ ನಿರ್ದೇಶಕರು, (ಪಶುಪಾಲನೆ) ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
11. ಸಹ ಕಂದಾಯ ಅಧಿಕಾರಿ, ಮಲ್ಲಸಂದ್ರ ಉಪ ವಿಭಾಗ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.